ಸಾಕ್ಷಿಯನ್ನು ದಿನಾಂಕಃ 24-08-2023 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಃ ಶ್ರೀ.ಎ.ಎಸ್.ವಾಯ್., ಪ್ರತಿವಾದಿ ನಂ.2 ರ ಪರ ವಕೀಲರಿಂದಃ**

ಮೃತ ಶಿವನಗೌಡ ತಮ್ಮನಗೌಡ ಪಾಟೀಲ ನನ್ನ ತಂದೆ. ನಮ್ಮ ಅಣ್ಣ ತಮ್ಮಂದಿರು ನಮಗೆ ಬರಬೇಕಾದ ಆಸ್ತಿಯಲ್ಲ ಅತಿಕ್ರಮಣ ಮಾಡಿದ್ದರಿಂದ ನನ್ನ ತಂದೆ ಅವರ ವಿರುದ್ಧ ಈ ದಾವೆ ದಾಖಲಿಸಿದ್ದರು. ಮುಧೋಳ ತಾಲೂಕಾ ಭೂಮಾಪನ ಅಧಿಕಾರಿ ಅವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪೀಟಿ ಶೀಟ ನೀಡಿದ್ದು, ಅದರ ಆಧಾರದ ಮೇಲೆ ಪ್ರತಿವಾದಿಯರು ಅತಿಕ್ರಮಣ ಮಾಡಿದ್ದಾರೆಂದು ದಾವೆ ದಾಖಲಿಸಿದ್ದರು.

ತಾಲೂಕಾ ಭೂಮಾಪನ ಅಧಿಕಾರಿ ಮುಧೋಳ ಇವರು ಜಮೀನಿನ ಮೋಜಿನಿ ಮಾಡಲು ಬಂದಾಗ ನಾವು ಹಾಜರಿದ್ದೇವು. ನಮ್ಮ ಮತ್ತು ಪ್ರತಿವಾದಿಯರ ಜಮೀನು ಅಳತೆ ಮಾಡಲು ತಾಲೂಕಾ ಭೂಮಾಪನ ಅಧಿಕಾರಿ ಬಂದಿದ್ದರು. ಮೋಜಿನಿ ಮಾಡಿದ ದಿನಾಂಕಃ 17.07.2019. ಮೋಜಿನಿ ಮಾಡಿ ತಾಲೂಕ ಭೂಮಾಪನ ಅಧಿಕಾರಿ ಅತಿಕ್ರಮಣಗೊಂಡ ಜಮೀನಿನ ಬಗ್ಗೆ ನಕಾಶೆ ತಯಾರಿಸಿ ನಮಗೆ ನೀಡಿದರು. ಸಾಕ್ಷಿ ನಿ.ಪಿ.3 ರಂತೆ ಈಗಾಗಲೇ ಸದರಿ ಶೀಟನ್ನು ಹಾಜರುಪಡಿಸಿದ್ದೆ ಎಂದು ನುಡಿಯುತ್ತಾರೆ. ನಿ.ಪಿ.3 ರ ಆಧಾರದ ಮೇಲೆ ದಾವೆ ದಾಖಲಿಸಿದ್ದೇನೆ. ನಿ.ಪಿ.3 ನ್ನು ಪ್ರಶ್ನಿಸಿ ಪ್ರತಿವಾದಿಯರು ADLR ಮುಧೋಳ ಇವರಲ್ಲಿ ಮೇಲ್ಮನವಿ ದಾಖಲಿಸಿದ್ದಾರೆಂದರೆ ಸಾಕ್ಷಿ ಆ ಕುರಿತು ತನಗೆ ಯಾವುದೇ ನೋಟಿಸ ಜಾರಿಯಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯನ್ನು 2020 ನೇ ಇಸವಿಯಲ್ಲಿ ದಾಖಲಾಗಿದ್ದು ಆ ಕಾಲಕ್ಕೆ ನನ್ನ ತಂದೆಯವರು ಬದುಕಿದ್ದರು. ಅವರಿಗೆ ಮೇಲ್ಮನವಿಯ ನೋಟಿಸ ಜಾರಿಯಾಗಿರಲಿಲ್ಲ. ದಿನಾಂಕಃ 20.01.2020 ರಂದು ತಾಲೂಕಾ ಭೂಮಾಪನ ಅಧಿಕಾರಿ ನೀಡಿದ ಅತೀಕ್ರಮಣ ವರದಿಗೆ ADLR ಮುಧೋಳ ಇವರು ತಡೆ ನೀಡಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಅಪ್ಪಾಶಿಗೌಡ ಪಾಟೀಲ ಹಾಗೂ ಶಂಕರಗೌಡ ಪಾಟೀಲ ನಮ್ಮ ಅಣ್ಣ ತಮಂದಿರಾಗಬೇಕು. ಚನಾಳ ಗ್ರಾಮದ ಜಮೀನು ರಿ.ಸ.68/1 ಮತ್ತು 68/2 ಇವು ನಮ್ಮ ಮತ್ತು ನಮ್ಮ ಅಣ್ಣ ತಮ್ಮಂದಿರ ಜಮೀನು ಎಂದರೆ ಸರಿ.

ಸಾಕ್ಷಿಗೆ ADLR ಮುಧೋಳ ಇವರು ದಿನಾಂಕಃ 20.01.2020 ರಂದು ನೀಡಿದ ಮಧ್ಯಂತರ ತಡೆಯಾಜ್ಞೆಯ ಆದೇಶವನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಓದಿ ಆ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ತಡೆಯಾಜ್ಞೆ ಇರುವುದರಿಂದ ಪ್ರಸ್ತುತ ದಾವೆ ದಾಖಲಿಸಲು ಬರುವುದಿಲ್ಲ ಎಂದರೆ ಸರಿ ಅಲ್ಲ. ದಾವೆ ಕಾನೂನು ಬದ್ಧವಾಗಿಲ್ಲ ಎಂದರೆ ಸರಿ ಅಲ್ಲ.

ವಾದಿ ಪರ ವಕೀಲರು ಮರು ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ